# ಕೃಷಿ ಅಭಿಯಾನ ಕಾರ್ಯಕ್ರಮ







ಸವಣೂರು ತಾಲೂಕಿನ ತೆಗ್ಗಿಹಳ್ಳಿ ಗ್ರಾಮದಲ್ಲಿ ದಿನಾಂಕ 14.06.2015 ಭಾನುವಾರದಂದು ಆಯೋಜಿಸಿದ್ದ ಕೃಷಿ ಅಭಿಯಾನ ಮತ್ತು ಬೀಜ ಆಂದೋಲನ ಕಾರ್ಯಕ್ರಮದಲ್ಲಿ ರೈತರ ಅನುಕೂಲಕ್ಕಾಗಿ ಸರ್ಕಾರ ರೂಪಿಸಿರುವ ವಿವಿಧ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲು ತಾಲೂಕು ಕೃಷಿ ಇಲಾಖೆ ವತಿಯಿಂದ ಕೃಷಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು, ಶಾಸಕರಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಿದರು. ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಕೃಷಿ ತಾಂತ್ರಿಕತೆಯ ವಿಷಯತಜ್ಞರಾದ ಶ್ರೀ ಡಿ.ಎಸ್. ಮಲ್ಲಿಕಾರ್ಜುನಪ್ಪಗೌಡರವರು ಮಣ್ಣಿನ ಫಲವತ್ತತೆ, ಪರೀಕ್ಷೆ, ಸಂರಕ್ಷಣೆ, ನಿರ್ವಹಣೆ, ಬೀಜೋಪಚಾರ ಮತ್ತು ಸಮಗ್ರ ಕೃಷಿ ಪದ್ಧತಿಯ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 80–100 ಜನ ರೈತ/ರೈತ ಮಹಿಳೆಯರು ಮತ್ತು ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು.

ಸವಣೂರು ತಾಲೂಕಿನ ಹತ್ತಿಮತ್ತೂರ, ರೈತ ಸಂಪರ್ಕ ಕೇಂದ್ರವತಿಯಿಂದ ಕೆ.ಬಿ. ತಿಮ್ಮಾಪುರ ಗ್ರಾಮದಲ್ಲಿ ದಿನಾಂಕ 18.06.2015 ಗುರುವಾರದಂದು ಆಯೋಜಿಸಿದ್ದ ಕೃಷಿ ಅಭಿಯಾನ ಮತ್ತು ಬೀಜ ಆಂದೋಲನ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ರವರು  ಮುಂಗಾರು ಬೆಳೆಗಳಲ್ಲಿ ಬೀಜೋಪಚಾರದ ಮಹತ್ವ ಮತ್ತು ಪರ್ಯಾಯ ಬೆಳೆ ಪದ್ಧತಿ ಬಗ್ಗೆ ರೈತರಿಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 50–60 ಜನ ರೈತ/ರೈತ ಮಹಿಳೆಯರು ಮತ್ತು ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು.

ಸವಣೂರು ತಾಲೂಕಿನ ಕಡಕೋಳ ಗ್ರಾಮದಲ್ಲಿ ದಿನಾಂಕ 20.06.2015 ಶನಿವಾರದಂದು ಆಯೋಜಿಸಿದ್ದ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ಹಾವೇರಿ ಶಾಸಕರಾದ ಶ್ರೀ ರುದ್ರಪ್ಪ ಲಮಾಣಿ ಅವರು ಕಾರ್ಯಕ್ರಮಕ್ಕೆ  ಚಾಲನೆ ನೀಡಿದರು. ಕೃವಿವಿ ಧಾರವಾಡದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ. ವ್ಹಿ. ನಾಟೀಕರ, ಕೀಟಶಾಸ್ತ್ರಜ್ಞರಾದ ಡಾ. ಪಿ.ಎಸ್. ಹೂಗಾರ ಹಾಗೂ ಕೃವಿಕೇ, ಹನುಮನಮಟ್ಟಿಯ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ರವರು ಭಾಗವಹಿಸಿ ಮುಖ್ಯ ಬೆಳೆಗಳ ಸಸ್ಯ ಸಂರಕ್ಷಣೆ, ಸಮಗ್ರ ಕೃಷಿ ಪದ್ಧತಿ ಮತ್ತು ಕೃಷಿ ಅಭಿಯಾನದ ಮಹತ್ವ ಕುರಿತು ರೈತರೊಂದಿಗೆ ಚರ್ಚಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 189 ರೈತ/ರೈತ ಮಹಿಳೆಯರು ಮತ್ತು ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು.

**ರೈತ ಚೇತನ ಯೋಜನೆ ಸಹಾಯವಾಣಿ ಕರೆ : 1800–425–1150 ರೈತರು ಕರೆ ಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.**

ಪ್ರಕಾಶಕರು : ಡಾ. ಸರೋಜನಿ ಜೆ ಕರಕಣ್ಣವರ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ಸಂಪಾದಕರು : ಡಾ. ಎಸ್.ಎ. ಅಷ್ಟಪುತ್ರೆ
ಸಹ ಸಂಪಾದಕರು : ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ
ವಿನ್ಯಾಸ : ಕು. ರೇಖಾ ಕೆ. ಎನ್.
ಅಕ್ಷರ ಜೋಡಣೆ : ಶ್ರೀಮತಿ ಸರೋಜ ತಳವಾರ

**ಆಂತರಿಕ ಪ್ರಸಾರಕ್ಕಾಗಿ ಮಾತ್ರ**

ಮುದ್ರಿತ ವಿಷಯ

ಇಂದ:
**ಕಾರ್ಯಕ್ರಮ ಸಂಯೋಜಕರು**
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ-581 135
ತಾ|| ರಾಣೇಬೆನ್ನೂರು, ಜಿ|| ಹಾವೇರಿ,
ದೂರವಾಣಿ:08373-253524, 9448495338
E-mail: kvk_haveri@rediffmail.com
Website :www.kvkhaveri.org
(ನಿಮ್ಮ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳುಹಿಸಿ)

ಗೆ,
______________________
______________________
______________________

ಪಿನ್ ಕೋಡ್



ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ವಾರ್ತಾ ಪತ್ರಿಕೆ

ಐ.ಸಿ.ಎ.ಆರ್.ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

Website: www. kvkhaveri.org    Email:kvk_haveri@rediffmail.com

ಜನವರಿ–ಜೂನ 2015    ಸಂಪುಟ–13    ಸಂಚಿಕೆ – 1 & 2

## ವಿಚಾರ ಸಂಕಿರಣ : ಶೇಂಗಾ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಮತ್ತು ಬೀಜೋತ್ಪಾದನೆ





ಕೇಂದ್ರದಲ್ಲಿ ದಿನಾಂಕ: 30.01.2015ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಶೇಂಗಾ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಮತ್ತು ಬೀಜೋತ್ಪಾದನೆ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನ್‌ರವರಾದ ಡಾ. ಎಸ್.ಐ. ಹಾಳಿಕಟ್ಟಿಯವರು ಶೇಂಗಾ ಬೆಳೆಯ ಬೇಸಾಯ ಕ್ರಮಗಳ ಮಹತ್ವದ ಬಗ್ಗೆ ಮಾತನಾಡಿದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೃಷಿ ಇಲಾಖೆ ರಾಣೇಬೆನ್ನೂರಿನ ಸಹಾಯಕ ಕೃಷಿ ನಿರ್ದೇಶಕರಾದ ಡಾ. ಭಾಗವಾನರವರು ಶೇಂಗಾ ಬೆಳೆಯ ಕುರಿತು ಸವಿಸ್ತಾರವಾಗಿ ಮಾತನಾಡಿ ರೈತರು ಇಂತಹ ಕಾರ್ಯಕ್ರಮದ ಸದುಪಯೋಗ ಪಡೆಯಲು ತಿಳಿಸಿದರು. ಅಧ್ಯಕ್ಷೀಯ ಭಾಷಣ ಮಾಡಿದ ಕೇಂದ್ರದ ಹಿರಿಯ ವಿಜ್ಞಾನಿಯಾದ  ಶ್ರೀ ಡಿ.ಎಸ್.ಎಂ. ಗೌಡ ಇವರು ಶೇಂಗಾ ಬೆಳೆಯ ಬೀಜೋತ್ಪಾದನೆ ಮಹತ್ವ ಮತ್ತು ಕೇಂದ್ರದಿಂದ ದೊರಕುವ ತಾಂತ್ರಿಕ ಮಾಹಿತಿಯ ಲಾಭ ಪಡೆದುಕೊಳ್ಳುವಂತೆ ರೈತರಿಗೆ ಕರೆ ನೀಡಿದರು.ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಎಸ್.ಐ. ಹಾಲಿಕಟ್ಟಿ, (ಡೀನ್), ಡಾ. ಜಿ. ಶಾಂತಕುಮಾರ, ಶ್ರೀ ಡಿ.ಎಸ್.ಎಂ. ಗೌಡ, ಡಾ. ಎಸ್.ಎ. ಅಷ್ಟಪುತ್ರೆ, ಡಾ. ಎಸ್.ಟಿ. ಪ್ರಭು,  ಡಾ. ಮಹಾಂತೇಶ ನಾಯಕ, ಡಾ. ಕಾವೇರಾ ಬಿರಾದಾರ,  ಡಾ. ಹೆಚ್. ನಾಗಪ್ಪ ಇವರು ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಡಾ. ಎಸ್.ಎ. ಅಷ್ಟಪುತ್ರೆ ಇವರು ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಸಲ್ಲಿಸಿದರು. ಜಿಲ್ಲೆಯ ವಿವಿಧ ಗ್ರಾಮಗಳಿಂದ ಸುಮಾರು 150 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು

## "ಕಿಸಾನ ಮೇಳ"





ದಿನಾಂಕ: 11.02.2015ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕಿಸಾನ ಮೇಳವನ್ನು ಶಿಗ್ಗಾಂವ್ ತಾಲ್ಲೂಕಿನ ಕುನ್ನೂರ ಗ್ರಾಮದ ಶ್ರೀ ಜಯದೇವ ಅಗಡಿಯವರ "ಅಗಡಿ ಫಾರ್ಮ"ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃ.ವಿ.ವಿ. ಧಾರವಾಡದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ.ವಿ. ನಾಟೀಕರ್‌ರವರು ತಾಂತ್ರಿಕ ಕೃಷಿಪೂರಕ ಮತ್ತು ಕೃಷಿ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನ್‌ರವರಾದ ಡಾ. ಎಸ್.ಐ. ಹಾಳಿಕಟ್ಟಿಯವರು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಲು ತಿಳಿಸಿದರು.

ಕುನ್ನೂರು ಗ್ರಾಮ ಪ್ರಗತಿಪರ ರೈತರಾದ ಶ್ರೀ ಜಯದೇವ ಅಗಡಿಯವರು ಸಮಗ್ರ ಕೃಷಿಯಲ್ಲಿ ತಮ್ಮನ್ನು ತಾವು ಹೇಗೆ ತೊಡಗಿಸಿಕೊಂಡರು ಎಂಬುದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಕೃ.ವಿ.ಕೇ. ಹನುಮನಮಟ್ಟಿಯ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ಇವರು ಕೃಷಿ ರೈತ ಕೂಟ/ಸಂಘಟನೆ, ಸಂಸ್ಕರಣೆಯ ಬಗ್ಗೆ ವಿವರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಟಿ. ಗಣಪತಿಯವರು ತೋಟಗಾರಿಕೆ ಹಾಗೂ ಡಾ. ಹೆಚ್. ನಾಗಪ್ಪರವರು ಸಿರಿಧಾನ್ಯಗಳ ಕುರಿತು ಉಪನ್ಯಾಸ ನೀಡಿದರು. ಶಿಗ್ಗಾಂವ್ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಶ್ರೀ ಪ್ರವೀಣ ಮಹೀಂದ್ರಕರ್, ಪ್ರಗತಿಪರ ರೈತರಾದ ಶ್ರೀ ಎನ.ಸಿ.ಪಾಟೀಲ್ ಹಾಗು ಶ್ರೀ ಗಂಗಣ್ಣರವರು ಉಪಸ್ಥಿತರಿದ್ದರು.  ಡಾ. ಎಸ್.ಎ. ಅಷ್ಟಪುತ್ರೆ ಇವರು ಕಾರ್ಯಕ್ರಮ ನಿರೂಪಿಸಿದರು ಹಾಗೂ ಡಾ. ಪಿ.ಜಿ. ತಿಪ್ಪನಗೌಡರ ರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಸುಮಾರು 15 ಮಳಿಗೆಗಳದ್ದವು. ಅವುಗಳಲ್ಲಿ ಸರ್ಕಾರಿ ಇಲಾಖೆಗಳು, ಸ್ವಸಹಾಯ ಗುಂಪುಗಳು, ಸರ್ಕಾರೇತರ ಸ್ವಯಂ ಸೇವಾ ಸಂಘಗಳು, ಪಶುವಿಜ್ಞಾನ ಡಿಪ್ಲೋಮಾ ಕಾಲೇಜು ಮತ್ತು ಜಯದೇವ ಅಗಡಿಯವರ ಮಳಿಗೆಗಳು ಇದ್ದವು. ಕುನ್ನೂರು, ಶ್ಯಾಡಂಬಿ, ದಾಸನಕೊಪ್ಪ, ಅಡವಿಸೋಮಾಪುರ ಹಾಗೂ ವರೂರ ಗ್ರಾಮಗಳಿಂದ ಸುಮಾರು 400 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು.

## "ರೈತ–ವಿಜ್ಞಾನಿಗಳ ಸಂವಾದ"



ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 13.02.2015ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ **"ರೈತ–ವಿಜ್ಞಾನಿಗಳ ಸಂವಾದ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಡೀನ್‌ರವರಾದ ಡಾ. ಎಸ್.ಐ. ಹಾಳಿಕಟ್ಟಿಯವರು ಕೃಷಿಯಲ್ಲಿ ಮಣ್ಣು ಮತ್ತು ನೀರಿನ ನಿರ್ವಹಣೆ ಬಹುಮುಖ್ಯ ಪಾತ್ರ ವಹಿಸುತ್ತದೆ.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೃ.ವಿ.ವಿ. ಧಾರವಾಡದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಕೆ.ವಿ. ನಾಟೀಕರ್‌ರವರು ಕೃಷಿ ಹಾಗೂ ಕೃಷಿ ಉಪಕಸುಬುಗಳನ್ನು ತಮ್ಮ ವಲಯಗಳಿಗೆ ಹೊಂದುವಂತೆ ಅಳವಡಿಸಿಕೊಂಡು ಸುಸ್ಥಿರ ಕೃಷಿಕರಾಗಲು ರೈತರಿಗೆ ಸಲಹೆ ನೀಡಿದರು.

ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರೇಮುಗದೂರು ಗ್ರಾಮದ ಪ್ರಗತಿಪರ ರೈತರಾದ ಶ್ರೀ ಎನ್.ಕೆ. ಕನವಳ್ಳಿ ಉಪಸ್ಥಿತರಿದ್ದರು.

ಅಧ್ಯಕ್ಷೀಯ ಭಾಷಣ ಮಾಡಿದ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ರವರು ಕೃಷಿ ವಿಜ್ಞಾನಕೇಂದ್ರದ ವಿಜ್ಞಾನಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಮಾರ್ಗದರ್ಶನ ಪಡೆಯಬೇಕಾಗಿ ಕೋರಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ವಿ.ಎಸ್. ಪಾಟೀಲ್, ಡಾ. ಅರ್ಜುನ ಶರ್ಮಾ, ಡಾ. ಸಿ.ಎಂ. ನಾವಲಗಟ್ಟಿ, ಡಾ. ಎಂ.ಆರ್. ರವಿಕುಮಾರ, ಡಾ. ಜಿ. ಶಾಂತಕುಮಾರ, ಡಾ. ಎಸ್.ಟಿ. ಪ್ರಭು, ಶ್ರೀ ಟಿ. ಗಣಪತಿ, ಡಾ. ಜಗದೀಶ, ಡಾ. ಪಿ. ಅಶೋಕ, ಡಾ. ಅನುರಾಜ, ಡಾ. ಕರಿಕಟ್ಟಿ ಮತ್ತು ಡಾ. ಎಸ್.ಎ. ಅಷ್ಟಪುತ್ರೆ ಎಲ್ಲ ವಿಜ್ಞಾನಿಗಳು ಇವರು ಸಂಬಂಧಪಟ್ಟ ವಿಷಯಗಳ ಬಗ್ಗೆ ರೈತರ ಜೊತೆ ಚರ್ಚೆ ನಡೆಸಿ ಮಾಹಿತಿ ನೀಡಿದರು.

ಡಾ. ಪಿ.ಜಿ. ತಿಪ್ಪನಗೌಡರ ರವರು ಕಾರ್ಯಕ್ರಮ ನಿರೂಪಿಸಿದರು. ಡಾ. ಎಸ್.ಎ. ಅಷ್ಟಪುತ್ರೆ ಯವರು ವಂದನಾರ್ಪಣೆ ಸಲ್ಲಿಸಿದರು. ಜಿಲ್ಲೆಯ ಕಾಕೋಳ, ಕಜ್ಜರಿ, ಅಸುಂಡಿ, ಅಲ್ಲೀಪುರ, ಹಿರೇಮುಗದೂರು, ಕದರಮಂಡಲಗಿ ಶಿಗ್ಗಾಂವ್, ಗ್ರಾಮಗಳಿಂದ ಸುಮಾರು 100 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು.

## ವಸ್ತು ಪ್ರದರ್ಶನ

ಡಾ. ಸರೋಜನಿ ಕರಕಣ್ಣವರ ಇವರ ಮುಂದಾಲತ್ವದಲ್ಲಿ **ಅಗ್ರೋವಿಸನ್ ಸೌತ ಸಮಿತ, ಬೆಳಗಾವಿ 21 ರಿಂದ 23 ಫೆಭ್ರುವರಿ 2015 ವಸ್ತು ಪ್ರದರ್ಶವನ್ನು ಏರ್ಪಡಿಸಲಾಗಿತ್ತು**





## ಕಿಸಾನ ಗೋಷ್ಠಿ



ಆತ್ಮಾ ಯೋಜನೆಯಡಿಯಲ್ಲಿ ಕಿಸಾನ ಗೋಷ್ಠಿ ಕಾರ್ಯಕ್ರಮವನ್ನು ದಿ:24.03.15 ರಂದು ಸವಣೂರು ತಾಲೂಕಿನ ಜಲ್ಲಾಪುರ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಹಾಯಕ ಜಂಟಿ ಕೃಷಿ ನಿರ್ದೇಶಕರಾದ ಹೆಚ್. ಹುಲಿರಾಜ, ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಕರಿಯಲ್ಲಪ್ಪನವರ ಹಾಗೂ ಊರಿನ ಪ್ರಮುಖರು ಹಾಗೂ ಕೇಂದ್ರದ ಬೇಸಾಯಶಾಸ್ತ್ರ ವಿಷಯ ತಜ್ಞರಾದ ಡಾ. ಪಿ.ಜಿ. ಥಪ್ಪನಗೌಡರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸವಣೂರು ತಾಲೂಕಿನ ಹಲವಾರು ಹಳ್ಳಿಗಳಿಂದ ಸುಮಾರು 200 ಕ್ಕೂ ಹೆಚ್ಚು ರೈತರು/ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿವಿಧ ಬೆಳೆಗಳು, ರೋಗ ಮತ್ತು ಕೀಟಗಳ ಬಗ್ಗೆ ಮಾಹಿತಿಯನ್ನು ರೈತರಿಗೆ ತಿಳಿಸಲಾಯಿತು. ಪ್ರಮುಖವಾಗಿ ಗೋವಿನಜೋಳ, ಹತ್ತಿ, ಜೋಳ, ಶೇಂಗಾ, ಮಲ್ಲಿಗೆ, ತೆಂಗು ಬೆಳೆಗಳಿಗೆ ಸಂಬಂದಪಟ್ಟ ವಿಷಯದ ಬಗ್ಗೆ ಚರ್ಚಿಸಲಾಯಿತು.

## ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯವತಿಯಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೈತರಿಗಾಗಿ ಅಂತರ ರಾಜ್ಯ ಶೈಕ್ಷಣಿಕ ಪ್ರವಾಸ 2014–15







ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯವತಿಯಿಂದ ಆಯೋಜಿಸಲ್ಪಟ್ಟ ರೈತರಿಗಾಗಿ ಅಂತರ್‌ರಾಜ್ಯ ಶೈಕ್ಷಣಿಕೆ ಪ್ರವಾಸವು 10 ದಿನಗಳವರೆಗೆ ಜರುಗಿತು. ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ 10 ರೈತರನ್ನು ಆಯ್ಕೆ ಮಾಡಿ, ಅವರಿಗೆ ಪ್ರಮುಖ ಬೆಳೆಗಳಾದ ಜೋಳ, ಹತ್ತಿ, ತರಕಾರಿ ಬೆಳೆಗಳು, ಹಣ್ಣಿನ ಬೆಳೆಗಳ ಬಗ್ಗೆ ಹೆಚ್ಚಿನ ತಾಂತ್ರಿಕತೆಗಳು ಮತ್ತು ಅವುಗಳ ನಿರ್ವಹಣೆ ಬಗ್ಗೆ ಹಾಗೂ ಕೃಷಿ ಮತ್ತು ಕೃಷಿ ಉಪಕಸುಬುಗಳನ್ನಾಧರಿಸಿ ಸುಸ್ಥಿರ ಕೃಷಿಕರಾಗಲು ಅನೇಕ ತಾಕುಗಳನ್ನು ಈ ಪ್ರವಾಸದಲ್ಲಿ ತೋರಿಸಲಾಯಿತು. ಈ ಪ್ರವಾಸದಲ್ಲಿ ಮಣ್ಣು ಮತ್ತು ನೀರಿನ ನಿರ್ವಹಣೆ, ಸೋಲಾರ್ ಪಂಪಸೆಟ್, ಡ್ರಿಪ್ ಹಾಗೂ ಹನಿ ನೀರಾವರಿಗಳ ಬಗ್ಗೆ ಸಮಗ್ರವಾಗಿ ತಮ್ಮ ಜಮೀನಿನಲ್ಲಿ ಸ್ವತಃ ತಾವೇ ಕಾರ್ಯರೂಪಕ್ಕೆ ತರಲು ಪ್ರವಾಸದಲ್ಲಿ ತೋರಿಸಿದ ಪ್ರಾತ್ಯಕ್ಷಿಕಾ ಘಟಕಗಳು ಸಹಾಯವಾಗುತ್ತವೆ.

ಕೃಷಿ ಸಂಶೋಧನಾ ಕೇಂದ್ರ, ಬೆಳವಟಗಿ, ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯ, ಬಾಗಲಕೋಟ, ಹಿಂಗಾರಿ ಜೋಳದ ಸಂಶೋಧನಾ ಕೇಂದ್ರ, ಸೊಲ್ಲಾಪುರ, ರಾಷ್ಟ್ರೀಯ ದಾಳಿಂಬೆ ಹಣ್ಣಿನ ಸಂಶೋಧನಾ ಕೇಂದ್ರ, ಸೊಲ್ಲಾಪುರ, ಕೃಷಿ ವಿಜ್ಞಾನ ಕೇಂದ್ರ, ಬಾರಾಮತಿ, ಈರುಳ್ಳಿ ಹಾಗೂ ಬೆಳ್ಳುಳ್ಳಿ ಬೆಳೆಗಳ ಸಂಶೋಧನಾ ನಿರ್ದೇಶನಾಲಯ, ಪುಣೆ, ಬೈಫ್, ಪುಣೆ, ಪ್ರಾಂತೀಯ ಹಣ್ಣುಗಳ ಸಂಶೋಧನಾ ಕೇಂದ್ರ, ವೆಂಗುರ್ಲಾ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಮಧ್ಯ ಕರಾವಳಿ ಕೃಷಿ ಸಂಸ್ಥೆ, ಗೋವಾ ಇನ್ನಿತರ ಹಲವಾರು ಕೇಂದ್ರಗಳಿಗೆ ಭೇಟಿಕೊಡಲಾಯಿತು.







## ಜಿಲ್ಲಾ ಕೃಷಿ ಉತ್ಸವ







ಕೃಷಿ, ಪಶುಸಂಗೋಪನಾ, ತೋಟಗಾರಿಕೆ, ರೇಷ್ಮೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ಜಿಲ್ಲಾ ಕೃಷಿ ಉತ್ಸವವು ದಿ: 22.03.2015 ರಂದು ಗುರು ಭವನ ಹಾವೇರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಬಸವರಾಜ ಎನ್. ಶಿವಣ್ಣನವರ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಶ್ರೀ ರುದ್ರಪ್ಪ ಎಂ. ಲಮಾಣಿ, ಶ್ರೀ ಕೆ.ಬಿ. ಅಂಜನಪ್ಪ, ಕ.ಸಾ.ಸೇ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಹಾವೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರಾದ ಶ್ರೀ ರಾಜಶೇಖರ ಐ. ಬಿಜಾಪುರರವರು ಉಪಸ್ಥಿತರಿದ್ದರು. ಜಿಲ್ಲಾ ಉತ್ಸವದಲ್ಲಿ ವಿಶೇಷ ತಾಂತ್ರಿಕ ಉಪನ್ಯಾಸಕರಾಗಿ ಡಾ. ಎಸ್.ಐ. ಹಾಳಿಕಟ್ಟಿ, ಡೀನ್ (ಕೃಷಿ), ಕೃ.ಮ, ಹನುಮನಮಟ್ಟಿ, ಡಾ. ಪಿ.ಜಿ. ತಿಪ್ಪನಗೌಡರ, ಕೃವಿಕೇ, ಹನುಮನಮಟ್ಟಿ, ಡಾ. ಎಂ.ಹೆಚ್. ತಟಗಾರ, ಮುಖ್ಯಸ್ಥರು, ತೋ.ಸಂ.ಕೇ., ದೇವಿಹೊಸೂರು ಹಾಗೂ ಡಾ. ಪ್ರಭುದೇವ ಅಜ್ಜಪ್ಪಳವರ, ಸ.ಪ್ರಾ., ತೋ.ಸಂ.ಕೇ., ದೇವಿಹೊಸೂರು ಭಾಗವಹಿಸಿ ಕೃಷಿಯ ಬಗ್ಗೆ ಮಾಹಿತಿ ಒದಗಿಸಿದರು. ಈ ಉತ್ಸವದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ವತಿಯಿಂದ ಕೃಷಿ ವಸ್ತು ಪ್ರದರ್ಶನ ಮಳಿಗೆ ಹಾಗೂ ಮಳಿಗೆಗೆ ಭೇಟಿ ನೀಡಿದ ರೈತರಿಗೆ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಲಾಯಿತು.